**1** ನೇ ಹೆಚ್ಚುವರಿ ಸಿವಿಲ್ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಭದ್ರಾವತಿ

ಸಿ.ಸಿ. ನಂ. **3295/2023**

| | | | |
|---|---|---|---|
| ಹೆಸರು | : | ಮನೋಜ | ದೋ.ಸಾ. 4 |
| ತಂದೆಯ ಹೆಸರು | : | ಕೃಷ್ಣಮೂರ್ತಿ | ಪ್ರಾ.ಸಾ. 2 |
| ವಯಸ್ಸು | : | 21 ವರ್ಷ | ದಿನಾಂಕಃ 20-08-2024 |
| ಉದ್ಯೋಗ | : | ವಿದ್ಯಾರ್ಥಿ | |
| ವಾಸಸ್ಥಳ | : | ಹಾರೋ ಬೆನವಳ್ಳಿ | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ 1 ನನ್ನ ತಾಯಿ. ಚಾಸಾ 5 ನನ್ನ ಅಕ್ಕ. ಚಾಸಾ 2 , 3 , 5 ಮತ್ತು 6 ನನಗೆ ಗೊತ್ತು. ಸದರಿ ಅವರು ನಮ್ಮ ಅಕ್ಕಪಕ್ಕದವರು.

ಈ ಪ್ರಕರಣದ ಆರೋಪಿ ನನ್ನ ಚಿಕ್ಕಪ್ಪ.

ದಿಃ 01.05.2023 ರಂದು ರಾತ್ರಿ 9 ಗಂಟೆಗೆ ನನ್ನ ತಂದೆ ಕೃಷ್ಣಮೂರ್ತಿ ರವರು ಮನೆಗೆ ಮದ್ಯಪಾನ ಮಾಡಿ ಬಂದಿದ್ದರು. ಆಗ ನನ್ನ ತಾಯಿ ಚಾಸಾ 1 ಮತ್ತು ಅಕ್ಕ ಚಾಸಾ5 ರವರು ದಿನ ಮನೆಗೆ ಕುಡಿದು ಬಂದರೆ ಜೀವನ ಹೇಗೆ ಮಾಡಬೇಕು ಎಂದು ನನ್ನ ತಂದೆಗೆ ಬೈಯುತ್ತಿದ್ದಾಗ ಆರೋಪಿ ನನ್ನ ಚಿಕ್ಕಪ್ಪ ಅಲ್ಲಿಗೆ ಬಂದು ನನ್ನ ಅಣ್ಣನಿಗೆ ಏನು ಬೈಯುತ್ತಿದ್ದೀರಾ ಎಂದು ಚಾಸಾ 1 ರವರ ತಲೆ ಕೂದಲು ಹಿಡಿದು ಎಳೆದಾಡಿ ಮನೆಯಿಂದ ಹೊರಗೆ ಕರೆ ತಂದು ಬಾಯಿಗೆ ಬಂದಂತೆ ಕೆಟ್ಟ ಶಬ್ದಗಳಿಂದ ಬೈದು ದೊಣ್ಣೆಯಿಂದ ಹೊಡೆದರು. ಯಾಕೆ ಹೊಡೆಯುತ್ತೀರಾ ಎಂದು ನಾನು ಮತ್ತು ಚಾಸಾ 5 ರವರು ಆರೋಪಿಯನ್ನು ಕೇಳಲು ಹೋದಾಗ ಆತ ನಮಗೂ ಹೊಡೆದು ನನ್ನನ್ನು ಚರಂಡಿಗೆ ಬೀಳಿಸಿ ತುಳಿದರು. ನಮ್ಮ ಕೂಗಾಟ ಕೇಳಿ ಚಾಸಾ 6 ಮತ್ತು 7 ರವರು ಬಂದು ಗಲಾಟೆ ಬಿಡಿಸಿದರು. ನಂತರ ಆರೋಪಿ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಸಾಯಿಸುತ್ತೇನೆ ಎಂದು ನಮಗೆ ಪ್ರಾಣ ಬೆದರಿಕೆ ಹಾಕಿದರು.

ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆವು. ನಂತರ ನಮ್ಮಕುಟುಂಬನದ ಹಿರಿಯವರಿಗೆ ಪೋನ್ ಮೂಲಕ ಗಲಾಟೆ ವಿಚಾರ ತಿಳಿಸಿದೆವು. ಸದರಿಯವರ ಸಲಹೆ ಮೇರೆಗೆ ಗಲಾಟೆ ನಡೆದ ದಿನ ದೂರು ಕೊಡಲಿಲ್ಲ. ಹಿರಿಯರು ಸಮಸ್ಯೆ ಬಗೆಹರಿಸದೆ ಇರುವುದರಿಂದ ದಿಃ 03.05.2023 ರಂದು ನಾವು ಆರೋಪಿತರ ವಿರುದ್ಧ ದೂರು ಕೊಟ್ಟೆವು.

ಆರೋಪಿ ನಮ್ಮ ತಾಯಿಗೆ ಹೊಡೆಯಲು ಬಳಸಿದ ದೊಣ್ಣೆಯನ್ನು ಈಗ ನೋಡಿ ಗುರುತಿಸುತ್ತೀನೆ. ಸಾಕ್ಷಿ ಗುರುತಿಸಿದ ದೊಣ್ಣೆಯನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವಿವಿ ವಕೀಲರಿಂದಃ

ಆರೋಪಿ ನನ್ನ ಚಿಕ್ಕಪ್ಪನ ಮನೆ ನಮ್ಮ ಮನೆ ಎದುರಿಗೆ ಇದೆ ಎನ್ನುವುದು ಸರಿ . ನಮ್ಮ ಮನೆಯ ಅಕ್ಕಪಕ್ಕ ಬೇರೆಯವರ ವಾಸದ ಮನೆಗಳಿವೆ ಎನ್ನುವುದು ಸರಿ . ನಿಮ್ಮಮತ್ತು ಆರೋಪಿ ನಡುವೆ ಎಷ್ಟು ವರ್ಷಗಳಿಂದ ಮಾತುಕತೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಪರಸ್ಪರ ಮನೆಗೆ ಹೋಗಿ ಬಂದು ಮಾಡುತ್ತಿದ್ದೇವೆ ಎನ್ನುತ್ತಾರೆ. ನಾವು ಮತ್ತು ಆರೋಪಿ ಈಗಲೂ ವಿಶ್ವಾಸದಿಂದ ಇದ್ದೇವೆ. ನನ್ನ ತಂದೆ ನನಗೆ ಗೊತ್ತಿರುವಂತೆ ನನಗೆ ಬುದ್ದಿ ಬಂದಾಗಿನಿಂದ ಮದ್ಯಪಾನ ಮಾಡುತ್ತಾರೆ. ನಮ್ಮ ತಂದೆ ವಿರುದ್ಧ ನಾವು ದೂರು ಕೊಟ್ಟಿಲ್ಲ. ನನ್ನ ತಂದೆ ಕುಡಿದು ಬಂದ ವಿಚಾರವಾಗಿ ನನ್ನ ಚಿಕ್ಕಪ್ಪನಾದ ಆರೋಪಿ ಯಾವತ್ತು ನಮ್ಮ ಬಳಿ ಬಂದು ವಿಚಾರ ಮಾಡಿಲ್ಲ ಮತ್ತು ನಮ್ಮ ತಂದೆಗೆ ಬುದ್ಧಿ ಹೇಳಿಲ್ಲ.

ನನ್ನ ತಂದೆ ಮತ್ತು ಆರೋಪಿ ನಡುವೆ ಜಮೀನಿನ ವಿಚಾರವಾಗಿ ಭಿನ್ನಾಭಿಪ್ರಾಯ ಇದೆ ಎನ್ನುವುದು ಸರಿಯಲ್ಲ. ಸದರಿ ಭಿನ್ನಾಭಿಪ್ರಾಯದಿಂದ ಕಳೆದ 7-8 ವರ್ಷಗಳಿಂದ ಆರೋಪಿ ಮತ್ತು ನಮ್ಮ ನಡುವೆ ಮಾತುಕತೆ ಇಲ್ಲ ಎನ್ನುವುದು ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಜಮೀನಿನ ವಿಚಾರವಾಗಿ ಭಿನ್ನಾಭಿಪ್ರಾಯ ಇರುವುದರಿಂದ ಆರೋಪಿ ನಮ್ಮ ತಂಟೆಗೆ ಯಾವತ್ತು ಬಂದಿಲ್ಲ ಮತ್ತು ನಮ್ಮ ತಂದೆ ಮದ್ಯಪಾನ ಮಾಡುವ ವಿಚಾರವಾಗಿ ಆರೋಪಿ ಯಾವತ್ತು ನಮ್ಮ ಮನೆಯ ಬಳಿ ಬಂದು ನನಗೆ ಅಥವಾ ನನ್ನ ತಾಯಿ ಮತ್ತು ಅಕ್ಕನಿಗೆ ಬೈದಿಲ್ಲ ಎನ್ನುವುದು ಸರಿಯಲ್ಲ.

ಗಲಾಟೆಯಲ್ಲಿ ನನಗೆ ಮತ್ತು ನನ್ನ ತಾಯಿಗೆ ರಕ್ತಗಾಯ ಆಗಿತ್ತು. ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ ಮತ್ತು ನಾನು ಆಸ್ಪತ್ರೆಯಲ್ಲಿ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಆಸ್ಪತ್ರೆಯಲ್ಲಿ ಪೊಲೀಸರಿಗೆ ಕೊಟ್ಟಿರುವ ಹೇಳಿಕೆಯನ್ನು ಹೊರುತಪಡಿಸಿ ಬೇರೆ ಯಾವುದೇ ಹೇಳಿಕೆ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಆಸ್ಪತ್ರೆಯಿಂದ ಬಂದ ಸುಮಾರು 5-6 ದಿನಗಳ ನಂತರ ಮತ್ತೆ ಹೇಳಿಕೆ ಕೊಟ್ಟಿದ್ದೆ ಎನ್ನುತ್ತಾರೆ. ನಾನು ಹೇಳಿದ ದಿನ ಯಾವುದೇ ಗಲಾಟೆ ಆಗಿಲ್ಲ ಹಾಗಾಗಿ ಸದರಿ ದಿನ ನಾವು ದೂರು ದಾಖಲಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದ ರೀತಿಯ ಯಾವುದೇ ಘಟನೆ ನಡೆದಿಲ್ಲ ಮತ್ತು ನಾನು ಹೇಳಿರುವುದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನನಗೆ , ಚಾಸಾ 1 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು , ಕೈಕಾಲುಗಳಿಂದ ಹೊಡೆದು ಜೀವ ಬೆದರಿಕೆ ಹಾಕಿದ್ದ ಮತ್ತು ನನ್ನ ಚಾಸಾ1 ರವರಿಗೆ ದೊಣ್ಣೆಯಿಂದ ಹೊಡೆದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಪಕ್ಕದ ಮನೆಯಲ್ಲಿ ನಮ್ಮ ಅತ್ತೆ ಗೌರಮ್ಮ ರವರ ಮನೆ ಇದೆ. ಇನ್ನೊಂದು ಬದಿಯಲ್ಲಿ ಚಂದ್ರೇಶ ಎಂಬುವವರ ಮನೆ ಇದೆ. ನನ್ನ ಅತ್ತೆ ಗೌರಮ್ಮ ನಮ್ಮ ಜೊತೆ ವಿಶ್ವಾಸದಿಂದ ಇದ್ದಾರೆ. ಸದರಿ ಗೌರಮ್ಮ ಗಲಾಟೆ ಬಿಡಿಸಲು ಬಂದಿಲ್ಲ. ಗಲಾಟೆ ಆಗಿದ್ದರೆ ಅಕ್ಕಪಕ್ಕದ ಮನೆಯವರಿಗೆ ಶಬ್ದ ಕೇಳಿಸಿರುತ್ತದೆ ಎಂದರೆ ಸರಿ . ನಾನು ಹೇಳುವಂತೆ ಯಾವುದೇ ಗಲಾಟೆ ನಡೆದಿಲ್ಲ ಹಾಗಾಗಿ ಗೌರಮ್ಮ ಗಲಾಟೆ ಬಿಡಿಸಲು ಬಂದಿಲ್ಲ ಎನ್ನುವುದು ಸರಿಯಲ್ಲ. ಜಮೀನಿನ ವಿಚಾರವಾಗಿ ಭಿನ್ನಾಭಿಪ್ರಾಯ ಇರುವುದರಿಂದ ಆರೋಪಿ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಎನ್ನುವುದು ಸರಿಯಲ್ಲ. ಮು ಮಾ1 ಕ್ಕೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**1 ನೇ ಹೆಚ್ಚುವರಿ ಪ್ರ.ದ.ನ್ಯಾ.ದಂ. ಭದ್ರಾವತಿ.**